Saying "You can use your own language..."

'ತರಗತಿ ಕೋಣೆಯಲ್ಲಿ ನೀವು ನಿಮ್ಮ ಸ್ವಂತದ ಭಾಷೆಯನ್ನು ಬಳಸಬಹುದು' ಎನ್ನುವುದು ಬದಲಾವಣೆಯನ್ನುಂಟು ಮಾಡಬಲ್ಲದು

ದ್ರಿಪ್ತಾ ಪಿಪಲಾಯಿ

ಪೀಠಿಕೆ

ಅ-ಶಿಷ್ಟ ಭಾಷೆಗಳನ್ನಾಡುವ ಪ್ರಾಂತ್ಯಗಳಲ್ಲಿ ಕೆಲಸ ಮಾಡುವ ಶಿಕ್ಷಕರಲ್ಲಿ ಆಯಾ ಪ್ರಾಂತ್ಯದ ಉಪಭಾಷಾ ಸಂಪನ್ಮೂಲಗಳ ಬಗೆಗೆ ಅರಿವನ್ನು ಮೂಡಿಸುವುದರ ಬಗೆಗೆ ಈ ಲೇಖನವು ತನ್ನ ಗಮನವನ್ನು ಕೇಂದ್ರೀಕರಿಸುತ್ತದೆ. ಮಕ್ಕಳು ಮಾತನಾಡುವ ಭಾಷೆಗಳ ಸಂರಚನೆ(structure)ಗಳನ್ನು ಪರಿಗಣಿಸಿ ಶಿಕ್ಷಕರು ತಮ್ಮ ಬೋಧನೆಗಳನ್ನು ಸಿದ್ಧಗೊಳಿಸಲು, ದ್ವಿಭಾಷೀಯ ಬೋಧನಾ ತಂತ್ರಗಳನ್ನು ಯೋಜಿಸಲು ಮತ್ತು ತರಗತಿಕೋಣೆಯಲ್ಲಿ ಬಳಸಲಾಗುವ ಬೋಧನಾ ಭಾಷೆಯ ಮೇಲೆ ಗಮನವಿಡಲು ಸಾಧ್ಯ ಎಂದು ನನಗೆ ಅನಿಸುತ್ತದೆ, ಆದರೆ, ಹಾಗೆ ಮಾಡುವಾಗ ಮಕ್ಕಳ ದಿನನಿತ್ಯದ ಭಾಷಾ ಬಳಕೆಯು ಬಹಳಷ್ಟು ವ್ಯತ್ಯಾಸಗಳನ್ನು ಹೊಂದಿರುತ್ತದೆ ಎನ್ನುವುದನ್ನು ನೆನಪಿನಲ್ಲಿಟ್ಟುಕೊಳ್ಳುವುದು ಮುಖ್ಯವಾಗುತ್ತದೆ.

ತರಗತಿಕೋಣೆಯಲ್ಲಿನ ಭಾಷಾ ವ್ಯತ್ಯಾಸಗಳು

ಈ ಅಧ್ಯಯನದ ಅಂಗವಾಗಿ ಪಶ್ಚಿಮ ಬಂಗಾಲದ ಪುರುಲಿಯ ಜಿಲ್ಲೆಯ ಒಂದು ಹಳ್ಳಿಯ ಶಾಲಾ ಮಕ್ಕಳಿಗೆ ವರ್ಕ್ ಶೀಟ್ ಒಂದನ್ನು ತುಂಬಲು ಹೇಳಲಾಗಿತ್ತು. ಅದರಲ್ಲಿ ಮಕ್ಕಳು ಸರಳ ಬಾಂಗ್ಲಾ ಪದಗಳನ್ನು ಬಳಸಿ ಖಾಲಿ ಬಿಟ್ಟ ಸ್ಥಳಗಳನ್ನು ತುಂಬಬೇಕಿತ್ತು. ಆ ಮಕ್ಕಳು ಬಾಂಗ್ಲಾದಲ್ಲಿ ಬರೆಯುವಾಗ ಅವರ ಭಾಷೆಯಲ್ಲಿನ ಸಮಸ್ಯಾ ಕ್ಷೇತ್ರಗಳನ್ನು ಗುರುತಿಸುವುದು ಈ ವರ್ಕ್‌ಶೀಟ್‌ಗಳ ಮೂಲ ಉದ್ದೇಶವಾಗಿತ್ತು. ಮನೆಗಳಲ್ಲಿ ಈ ಮಕ್ಕಳು ಕುರ್ಮಾಲಿ ಭಾಷೆಯನ್ನು

ಮಾತನಾಡುತ್ತಿದ್ದು , ಅದು ಆ ಮಕ್ಕಳು ಶಾಲೆಯಲ್ಲಿ ಆಡುವ ಶಿಷ್ಟ ಬಾಂಗ್ಲಾಕ್ಕಿಂತ ಸಂರಚನಾತ್ಮಕವಾಗಿ ಭಿನ್ನವಾಗಿದೆ.

6 ರಿಂದ 8 ನೇ ತರಗತಿಯ ಒಳಗಿನ ಹೆಚ್ಚಿನ ಮಕ್ಕಳು ಹಲವು ವಾಕ್ಯಗಳನ್ನು ಉತ್ತಮ ಪುರುಷ ಸರ್ವನಾಮ(first person pronouns) ಗಳಿಗೆ ಪ್ರಥಮ ಪುರುಷ(third person)ದ ಕ್ರಿಯಾಪದಗಳನ್ನಿಟ್ಟು ರಚಿಸಿದ್ದರು. ಹಲವು ಮಕ್ಕಳ ಹಾಳೆಗಳಲ್ಲಿ ಈ ಕೆಳಗಿನ ರೀತಿಯ ವಾಕ್ಯಗಳು ಸಾಮಾನ್ಯವಾಗಿದ್ದವು:

(ಪ್ರತಿ ಶಬ್ದದ ಕೆಳಗೆ ಅದರ ಅರ್ಥವನ್ನು ಕೊಡಲಾಗಿದೆ)

1. ಅಮಿ ಕೋಲಾ ಖಾಯೆ.

   I banana eat

   ನಾನು ಬಾಳೆಹಣ್ಣು ತಿನ್ನು
   (ಪ್ರಥಮ ಪುರುಷ ವರ್ತಮಾನ ಕಾಲ)

ಇನ್ನೂ ಕೆಲವು ಮಕ್ಕಳ ಉತ್ತರದ ಹಾಳೆಗಳ ಮೇಲೆ ಕಣ್ಣಾಡಿಸಿದಾಗ ಆ ಹಳ್ಳಿಯ ಮಕ್ಕಳಿಗೆ ಬಾಂಗ್ಲಾ ಭಾಷೆಯಲ್ಲಿ ಉತ್ತಮ ಪುರುಷದ ಸರ್ವನಾಮಗಳಿಗೆ ಯಾವ ಕ್ರಿಯಾಪದಗಳನ್ನು ಬಳಸಬೇಕೆಂದು ಗೊತ್ತಿರಲಿಲ್ಲ ಎನ್ನುವುದು ಕಂಡುಬಂದಿತು. ಕುರ್ಮಾಲಿ ಭಾಷೆಯಲ್ಲಿ ಬಾಂಗ್ಲಾ ಭಾಷೆಯಲ್ಲಿ ಇರುವುದಕ್ಕಿಂತ ಭಿನ್ನವಾದ ಕ್ರಿಯಾ ವಿಭಕ್ತಿಗಳನ್ನು ಬಳಸಲಾಗುತ್ತದೆ.

ಬಂಗಾಲದ ಬೇರೆ ಬೇರೆ ಪ್ರಾಂತ್ಯಗಳಲ್ಲಿ ಹೆಚ್ಚಿನದಾಗಿ ಗ್ರಾಮೀಣ ಭಾಗಗಳಲ್ಲಿ ಕೆಲಸ ಮಾಡುವ (ದೊಡ್ಡ ಪ್ರಮಾಣದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರು) ಶಿಕ್ಷಕರು ತಮ್ಮ ಮಕ್ಕಳೆಲ್ಲರೂ ಒಂದೇ ಭಾಷೆಯಲ್ಲಿ ಮಾತನಾಡುತ್ತಾರೆ ಎಂದು ಭಾವಿಸುತ್ತಾರೆ. ಅಲ್ಲಿ ಆ ಮಕ್ಕಳ ಭಾಷಾ ವ್ಯತ್ಯಾಸಗಳನ್ನು ಅಲಕ್ಷಿಸಲಾಗುತ್ತದೆ. ಅಲ್ಲಿಯ ಶಿಕ್ಷಕರೆಲ್ಲ ಶಿಷ್ಟ ಬಾಂಗ್ಲಾದಲ್ಲಿ ಬರೆದಿರುವ ಪಠ್ಯಪುಸ್ತಕಗಳನ್ನು ಬೋಧಿಸುತ್ತಾರೆ ಮತ್ತು ಪ್ರಾದೇಶಿಕ ಶಿಷ್ಟ ಭಾಷೆಯಲ್ಲಿಯೇ ತಮ್ಮ ಹೆಚ್ಚಿನ ಪಾಠಗಳನ್ನು

ಯೋಜಿಸಿಕೊಳ್ಳುತ್ತಾರೆ. ಹೆಚ್ಚಿನ ಸಂದರ್ಭಗಳಲ್ಲಿ ಶಿಕ್ಷಕರು ತಮ್ಮ ಮಕ್ಕಳು ಮಾತನಾಡುವ ಭಾಷೆಗಳಲ್ಲಿನ ಬಹುರೂಪತೆ ಅಥವಾ ವ್ಯತ್ಯಸನೀಯತೆ (variability) ಎಂಬ ರೀತಿಯ ಪರಿಕಲ್ಪನೆಗಳನ್ನು ತರಗತಿಕೋಣೆಯಲ್ಲಿ ಒಂದು ಸಂಪನ್ಮೂಲವೆಂಬಂತೆ ಪರಿಗಣಿಸುವುದಿಲ್ಲ.

ವಾಸ್ತವದಲ್ಲಿ, ತರಗತಿ ಕೋಣೆಯಲ್ಲಿ ಮಕ್ಕಳು ಒಂದೋ ಬೇರೆ ಬೇರೆ ಭಾಷೆಗಳನ್ನು ಮಾತನಾಡುವವರಾಗಿರುತ್ತಾರೆ, ಅಥವಾ ಒಂದೇ ಭಾಷೆಯ ಬೇರೆ ಬೇರೆ ರೂಪಗಳನ್ನು ಮಾತನಾಡುವವರಾಗಿರುತ್ತಾರೆ. ಅವರಲ್ಲಿ ಯಾರೂ ಸಹ ತಮ್ಮ ನಿತ್ಯದ ಮಾತುಕತೆಗಳಲ್ಲಿ ಒಂದೇ ಭಾಷೆಗೆ ಸೇರಿದ ಒಂದು ಭಾಷಿಕ ಘಟಕಗಳ ಸೆಟ್ಟನ್ನು (ಅಥವಾ ಶಬ್ದಗಳು, ಸಂರಚನೆಗಳನ್ನು) ಬಳಸುತ್ತಿರುವುದಿಲ್ಲ. ಒಂದು ವೇಳೆ ಮಕ್ಕಳು ಭಾಷೆಯೊಂದರ ಅ-ಶಿಷ್ಟ ಪ್ರಕಾರವೊಂದನ್ನು ಮಾತನಾಡುವವರಾಗಿದ್ದರೆ ತರಗತಿಕೋಣೆಯಲ್ಲಿ ಮಾತ್ರ ಶಿಕ್ಷಕರು ಮತ್ತು ಅವರ ತರಗತಿಯ ಮಕ್ಕಳು ಹಿಂದಿಯಿರಲಿ, ತೆಲುಗು, ಅಥವಾ ಬಾಂಗ್ಲಾ- ಯಾವುದೇ ಭಾಷೆಯ ಶಿಷ್ಟ ಪ್ರಕಾರವನ್ನು ಮಾತನಾಡಬೇಕು ಎಂದು ಸಾಮಾನ್ಯವಾಗಿ ಪರಿಗಣಿಸಲಾಗುತ್ತದೆ. ಹೀಗಾಗಿ ತರಗತಿಕೋಣೆಗಳಲ್ಲಿ ಸ್ಥಳೀಯ ಭಾಷೆಗಳ ಬಳಕೆಯನ್ನು ಉತ್ತೇಜಿಸುವುದಿಲ್ಲ. ಬಹಳ ಸಂದರ್ಭಗಳಲ್ಲಿ ಶಿಕ್ಷಕರಿಗೆಂದು ಇರುವ ಮಾರ್ಗದರ್ಶಿ ಕೈಪಿಡಿಗಳು ಅಧಿಕಾರಯುತ ದನಿಯಲ್ಲಿ ಪ್ರಾದೇಶಿಕ ಶಿಷ್ಟ ಭಾಷೆಯನ್ನೇ ಬಳಸಿ ಬೋಧಿಸಬೇಕು ಎಂದು ನಿರ್ದೇಶಿಸುತ್ತವೆ. ಭಾಷೆಯೊಂದರ ವಿವಿಧ ಉಪಭಾಷೆಗಳನ್ನು ಮಾತನಾಡುವ ಮಕ್ಕಳನ್ನು ಯಾವುದೋ ಒಂದು 'x' ಸಮುದಾಯದ ಸದಸ್ಯರೆಂಬಂತೆ ಕಾಣಲಾಗುತ್ತದೆ ಮತ್ತು ಆ ಸಮುದಾಯವು ಏಕ ಸ್ವರೂಪವುಳ್ಳದ್ದು ಎಂದು ಭಾವಿಸಲಾಗುತ್ತದೆ. ವಾಸ್ತವದಲ್ಲಿ ಅಂತಹ ಏಕ ಸ್ವರೂಪವುಳ್ಳ ಒಂದು ಭಾಷಿಕ ಗುಂಪು ಮತ್ತು ಸಮುದಾಯವೆನ್ನುವುದೇ ಒಂದು 'ಕಲ್ಪಿತ ಸಮುದಾಯ'ವಾಗಿರುತ್ತದೆ (ಆಂಡರ್ಸನ್, 1983).

ತರಗತಿಯಲ್ಲಿ ಸ್ಥಳೀಯ ಅಥವಾ ಮನೆಯಲ್ಲಿ ಮಾತನಾಡುವ ಭಾಷೆಯನ್ನು ಬಳಸದಂತೆ ಮಗುವನ್ನು ತಡೆಯುವುದು ಪರೋಕ್ಷವಾಗಿ ಮಗುವಿನ ಭಾಷೆಯು ಕೆಳಮಟ್ಟದ್ದು ಎಂದು ಅವನಿಗೆ/ಅವಳಿಗೆ ಹೇಳಿದಂತೆ ಆಗುತ್ತದೆ. ಅದು ವಿದ್ಯಾರ್ಥಿಗಳ ಸಾಂಸ್ಕೃತಿಕ ಹಕ್ಕುಗಳಿಗೆ ಅಗೌರವ ತೋರಿಸಿದಂತೆ, ಮತ್ತು ಮಗುವಿನ ಸಹಜ ಸೃಜನಶೀಲತೆಯ ಸ್ಫುರಣೆಗೆ(spontaneous creativity) ತಡೆಗೋಡೆಯೊಂದನ್ನು ನಿರ್ಮಿಸಿದಂತೆ ಆಗುತ್ತದೆ. ತರಗತಿಯಲ್ಲಿ ವಿಷಯಗಳನ್ನು ವಿವರಿಸುವಾಗ ಅಥವಾ ಚಿತ್ರಿಸುವಾಗ ಪ್ರಾಥಮಿಕ ಶಾಲೆಯ ಶಿಕ್ಷಕರು ಅ-ಶಿಷ್ಟ ಭಾಷೆಗಳು ಎಂದು ನಾವು ಯಾವುದನ್ನು ಕರೆಯುತ್ತೇವೆಯೋ ಆ ಭಾಷೆಗಳ ಬೇರೆ ಬೇರೆ ರೂಪಗಳನ್ನು ಬಳಸುವುದು ಬಹಳ ಅಪರೂಪ. ಆದರೆ ತರಗತಿಯಲ್ಲಿ ನಡೆಯುವ ದಿನನಿತ್ಯದ ಸಂವಹನಗಳಲ್ಲಿ ಅದನ್ನು ಬಳಸುವುದು ಬಹಳ ಅನುಕೂಲಕರ. ಅಷ್ಟೇ ಅಲ್ಲ, ಮಕ್ಕಳು ಮನೆಯಲ್ಲಿ ಮಾತನಾಡುವ ಭಾಷೆಯಲ್ಲಿ ಮಾತುಕತೆ ನಡೆಸುವುದು ನಿಜವಾಗಿಯೂ ಮುಖ್ಯವಾಗುತ್ತದೆ, ಔಪಚಾರಿಕ ಶಿಕ್ಷಣ ಕ್ರಮದಲ್ಲಿ ಬಳಸುವ ಭಾಷೆಯ ಜೊತೆಜೊತೆಗೇ, ಹೊಸ ವಾಕ್ಯಗಳನ್ನು ರಚಿಸಲು ಮತ್ತು ಅದನ್ನು ತಮ್ಮ ಬರವಣಿಗೆಯಲ್ಲಿ ಬಳಸಲು ಮಕ್ಕಳಿಗೆ ತಮ್ಮ ಮನೆ ಭಾಷೆಯನ್ನು ಕೂಡಾ ಉಪಯೋಗಿಸುವ ಅವಕಾಶ ಕೊಡುವುದು ಮುಖ್ಯ.

ಭಾಷಾವೈಜ್ಞಾನಿಕ ವೈಶಿಷ್ಟ್ಯಗಳು ಮತ್ತು ದೋಷಗಳು: ತರಗತಿ ಕಲಿಕೆ

ಪ್ರಸ್ತುತ ಲೇಖನವು ಶಿಕ್ಷಕರಿಗಾಗಿ ಹಮ್ಮಿಕೊಂಡ ಒಂದು ಜಾಗೃತಿ ಆಂದೋಲನದ ಸ್ವರೂಪವನ್ನು ವಿವರಿಸುತ್ತದೆ. ಮಕ್ಕಳ ಸ್ಥಳೀಯ ಭಾಷಾ ಜ್ಞಾನವನ್ನು ತರಗತಿಯಲ್ಲಿ ಒಂದು ಸಂಪನ್ಮೂಲವಾಗಿ ಬಳಸಿಕೊಳ್ಳಬಹುದು ಎಂಬ ನೋಟವನ್ನು ಹಂಚಿಕೊಳ್ಳುವುದೇ ಈ ಆಂದೋಲನದ ಗುರಿ. 'ತರಗತಿ ಕೋಣೆಯಲ್ಲಿ ನಿಮ್ಮದೇ ಭಾಷೆಯ ಬಳಕೆ' ಎಂಬುದು ಪಶ್ಚಿಮ ಬಂಗಾಲದಲ್ಲಿ ವಿವಿಧ ಶಾಲೆಗಳಲ್ಲಿ ಹಮ್ಮಿಕೊಂಡ ಒಂದು ಜಾಗೃತಿ ಆಂದೋಲನವಾಗಿತ್ತು. ಅದರ ಅಂಗವಾಗಿ ತಿರುಗಾಡುತ್ತ ನಾನು ಕಳೆದ ನಾಲ್ಕು ತಿಂಗಳಲ್ಲಿ ಪಶ್ಚಿಮ ಬಂಗಾಲದ ನಾಲ್ಕು ಬೇರೆ ಬೇರೆ

ಮೂಲೆಗಳಲ್ಲಿದ್ದ ಶಿಕ್ಷಕರು ಮತ್ತು ಅವರ ವಿದ್ಯಾರ್ಥಿಗಳನ್ನು ಭೇಟಿ ಮಾಡಿದೆ. ಮಕ್ಕಳ ಮನೆ ಭಾಷೆಯ ಬಗೆಗೆ ಹೆಚ್ಚಿನ ವಿವರಗಳನ್ನು ಪಡೆದುಕೊಳ್ಳುವುದು ಮತ್ತು ತರಗತಿ ಕೋಣೆಯಲ್ಲಿ ಅವರಿಗೆ ಎದುರಾಗಬಹುದಾದ ಭಾಷಾ ಸಮಸ್ಯೆಗಳನ್ನು ನಿವಾರಿಸಲು ನೆರವಾಗುವುದು ಈ ತಿರುಗಾಟದ ಗುರಿಯಾಗಿತ್ತು. ಬಂಗಾಲದ ನಾಲ್ಕು ಜಿಲ್ಲೆಗಳಲ್ಲಿ (ಪುರುಲಿಯಾ, ಜಲಪೈಗುರಿ, ಮಾಲ್ಡಾ ಮತ್ತು ಉತ್ತರ 24 ಪರಗಣಗಳು) ಹರಡಿಕೊಂಡ ಕುರ್ಮಾಲಿ, ರಾಜಬಂಶಿ, ಖೊಟ್ಟಾ ಬಾಂಗ್ಲಾ ಪೂರ್ವ ಬಂಗಾಲಿ ಉಪಭಾಷೆಗಳ ಪ್ರಭಾವವುಳ್ಳ ಬಾಂಗ್ಲಾ ಭಾಷೆಯನ್ನಾಡುವ ಮಕ್ಕಳನ್ನು ಭೇಟಿ ಮಾಡಬೇಕೆಂಬುದು ತಿರುಗಾಟದ ಲಕ್ಷ್ಯವಾಗಿತ್ತು.

ತಮ್ಮ ಮಕ್ಕಳ ಭಾಷೆಗಳ ಮೂಲ ಸಂರಚನಾತ್ಮಕ ವೈಶಿಷ್ಟ್ಯಗಳ ಬಗೆಗೆ ನಮಗೆ ಮಾಹಿತಿ ಒದಗಿಸುವ ಮೂಲಕ ನಮ್ಮ ಯೋಜನೆಗೆ ಆ ನಾಲ್ಕು ಜಿಲ್ಲೆಗಳ ಶಿಕ್ಷಕರು ಸಹಾಯ ಮಾಡಿದರು. ಮಕ್ಕಳ ಭಾಷೆಗಳ ಬಗೆಗೆ ಒಂದು ಕಲ್ಪನೆ ಸಿಕ್ಕ ನಂತರ ಮಕ್ಕಳ ಮನೆ ಭಾಷೆಗಳು ಮತ್ತು ಶಾಲಾ ಭಾಷೆಗಳ ನಡುವಿನ ಮುಖ್ಯ ವ್ಯತ್ಯಾಸಗಳನ್ನು ಪಟ್ಟಿ ಮಾಡಲಾಯಿತು ಮತ್ತು ಅವೆರಡೂ ಭಾಷೆಗಳ ನಡುವಿನ ವ್ಯತ್ಯಾಸಗಳನ್ನು ಗಮನದಲ್ಲಿಟ್ಟುಕೊಂಡು ಮಕ್ಕಳಿಗಾಗಿ ವರ್ಕ್ ಶೀಟ್ ಗಳನ್ನು ತಯಾರಿಸಲಾಯಿತು. ಇದರ ಹಿಂದಿನ ನಮ್ಮ ಊಹೆ ಏನಿತ್ತೆಂದರೆ, ಈ ಎರಡು ಭಾಷೆಗಳ ನಡುವಿನ ವ್ಯತ್ಯಾಸಗಳನ್ನು ಮೊದಲೇ ಹೇಳಲು ಸಾಧ್ಯವಾದರೆ ಮಕ್ಕಳು ತರಗತಿಯೊಳಗಿನ ಕಲಿಯಬೇಕಾದ ಪಾಠಗಳಲ್ಲಿ ಮತ್ತು/ಅಥವಾ ಸಂವಹನಗಳಲ್ಲಿ ಯಾಕೆ "ದೋಷ"ಗಳನ್ನು ಮಾಡುತ್ತಾರೆ ಎಂಬುದರ ಬಗೆಗೆ ಒಂದು ಕಲ್ಪನೆಯು ನಮಗೆ ಸಿಕ್ಕುತ್ತದೆ ಎಂಬುದು.

ಆ ಮಕ್ಕಳೊಂದಿಗೆ ಅನೌಪಚಾರಿಕ ಸಂದರ್ಶನಗಳನ್ನೂ ನಡೆಸಲಾಯಿತು. ಬೆಳಿಗ್ಗೆ ಮಕ್ಕಳೆಲ್ಲ ಗುಂಪುಗೂಡಿ ತಮ್ಮ ಶಾಲೆಗಳಿಗೆ ಬಂದರು. ಮಧ್ಯಾಹ್ನದ ಸಮಯದಲ್ಲಿ ಶಾಲೆಗಳ ಶಿಕ್ಷಣ ಸಹಾಯ ಕೇಂದ್ರ ತರಗತಿಗಳಲ್ಲಿ ಕೂಡಾ ಅವರೊಂದಿಗೆ ಸಂವಹನ ನಡೆಯಿತು. ಅವರ ದಿನನಿತ್ಯದ ಭಾಷಾ ಸಮಸ್ಯೆಗಳನ್ನು ಪತ್ತೆ ಹಚ್ಚುವ ಸಲುವಾಗಿ ರಚಿಸಿದ

ವರ್ಕ್ ಶೀಟ್ ಗಳನ್ನು ವಿದ್ಯಾರ್ಥಿಗಳು ತುಂಬಿದರು. ಕೆಲವು ವಿದ್ಯಾರ್ಥಿಗಳು ಒಂದು ವಾಕ್ಯವನ್ನೋ ಅಥವಾ ಸಣ್ಣ ಪ್ಯಾರಾವನ್ನೋ (ಚಿತ್ರಗಳ ಸಮೇತ) ಬರೆದರು. ಅವರ ಬರೆಹದ ಎಲ್ಲ ನಮೂನೆಗಳನ್ನೂ, ವರ್ಕ್ ಶೀಟ್ ಗಳನ್ನೂ ಕಲೆ ಹಾಕಿದ ನಂತರ ಅವರು ಮಾಡುತ್ತಿದ್ದ ದೋಷಗಳ ಮಾದರಿಗಳು ಸ್ಪಷ್ಟವಾದವು.

ಈ ದೋಷಗಳ ಮಾದರಿಗಳನ್ನು ನಾವು ಹೇಗೆ ನಿರೂಪಿಸಬಹುದು? ಉದಾಹರಣೆಗೆ, ಮಾಲ್ಡಾ ಜಿಲ್ಲೆಯ ಒಂದು ಗ್ರಾಮದ ಮಕ್ಕಳು ತುಂಬಿದ ವರ್ಕ್ ಶೀಟ್ ಗಳಲ್ಲಿ ಶಾಬ್ದಿಕ ದೋಷಗಳ ಕೆಲವು ಮಾದರಿಗಳು ಕಂಡು ಬಂದವು. ಕೆಲವು ವಿದ್ಯಾರ್ಥಿಗಳು ಕ್ರಿಯಾಪದವಿಲ್ಲದೆ ವಾಕ್ಯಗಳನ್ನು ರಚಿಸಿದ್ದರು. ಬಾಂಗ್ಲಾ ಭಾಷೆಯಲ್ಲಿ ಕ್ರಿಯಾಪದವು ವಾಕ್ಯದ ಕೊನೆಯಲ್ಲಿ ಬರುವುದರಿಂದ ಕೆಲವು ವಾಕ್ಯಗಳು ಕೇವಲ ಕರ್ತೃಪದವನ್ನು ಮತ್ತು ಕರ್ತೃ ಪದದ ನಂತರ ಕರ್ಮ ಪದವನ್ನು ಮಾತ್ರ ಹೊಂದಿದ್ದವು ಕ್ರಿಯಾಪದಕ್ಕೆಂದು ಬಿಟ್ಟಿದ್ದ ಜಾಗವು ಹಲವು ಹಾಳೆಗಳಲ್ಲಿ ಹಾಗೆಯೇ ಖಾಲಿ ಇತ್ತು. ಉದಾಹರಣೆಗೆ, ಒಂದು ಮಗುವು ಈ ಕೆಳಗಿನ ವಾಕ್ಯವನ್ನು ರಚಿಸಿತ್ತು:

2. ಅಮಿ ಏಕ್ತಾ ಫೂಲ್ (ಕ್ರಿಯಾಪದವನ್ನು ತುಂಬಿರಲಿಲ್ಲ)

   I one flower

   ನಾನು ಒಂದು ಹೂವು

ಬಹುಶಃ ಆ ಮಗುವು ತಾನು ಒಂದು ಹೂವನ್ನು ನೋಡಿದ್ದೇನೆ ಎಂದೋ ಅಥವಾ ಬಿಡಿಸಿದ್ದೇನೆ ಎಂದೋ ಬರೆಯಲು ಯತ್ನಿಸಿರಬೇಕು. ಆದರೆ ಆಕೆಗೆ ಯಾವ ಕ್ರಿಯಾವಿಭಕ್ತಿಯನ್ನು ಬಳಸಬೇಕೆಂಬುದು ಗೊತ್ತಾಗಲಿಲ್ಲ, ಹೀಗಾಗಿ ಕ್ರಿಯಾಪದವನ್ನೇ ತುಂಬಲಿಲ್ಲ. ಇನ್ನೂ ಕೆಲವು ಸಂದರ್ಭಗಳಲ್ಲಿ ಮಕ್ಕಳು ಸ್ಥಳೀಯ ಭಾಷೆಯ ಪ್ರಧಾನ ವಾಕ್ಯಾಂಶದ ಅಥವಾ ಮ್ಯಾಟ್ರಿಕ್ಸ್ ವಾಕ್ಯಾಂಶದ (Main Clause or Matrix Clause) ಕ್ರಿಯಾಪದವನ್ನು ಮತ್ತು ಬಾಂಗ್ಲಾ ಭಾಷೆಯ ಅಧೀನ(ಉಪ)ವಾಕ್ಯಾಂಶದ ಅಥವಾ ಎಂಬೆಡೆಡ್ ವಾಕ್ಯಾಂಶದ (Subordinate Clause or Embedded Clause)

ಕ್ರಿಯಾಪದವನ್ನೂ ಬಳಸಿದ್ದರು. ಶಿಕ್ಷಕರು ಅವರ ಉತ್ತರಗಳನ್ನು ತಪ್ಪೆಂದು ತೀರ್ಮಾನಿಸಿದರು. ಆದರೆ ವಾಸ್ತವದಲ್ಲಿ ಮಗುವು ತನ್ನ ಮನೋವ್ಯಾಕರಣಕ್ಕೆ ಸೇರಿದ ಎರಡು ಕ್ರಿಯಾಪದದ ರೂಪಗಳನ್ನು ಬಳಸಿತ್ತು.

ಬೋಧನೆಯ ದೃಷ್ಟಿಯಿಂದ ಕಲಿಕಾ ಸಾಮಗ್ರಿಗಳನ್ನು ರೂಪಿಸಲು ಭಾಷೆಯ ವ್ಯತ್ಯಸನೀಯತೆಯನ್ನು ಒಂದು ಸಂಪನ್ಮೂಲದಂತೆ ಬಳಸಲಾಗುತ್ತದೆ. ತರಗತಿಕೋಣೆಯಲ್ಲಿ ಬೇರೆ ಬೇರೆ ಭಾಷೆಗಳನ್ನು ಹೇಗೆ ಬಳಸಿಕೊಳ್ಳಬಹುದು ಎಂಬುದರ ಮೇಲೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಲಿ ಎಂದು ಶಿಕ್ಷಕರೊಂದಿಗೂ ಸಭೆ ನಡೆಸಲಾಯಿತು. ವಿದ್ಯಾರ್ಥಿಗಳು ಪದೇಪದೇ ಅಥವಾ ಕೆಲವೊಮ್ಮೆ ಮಾಡುವ ಭಾಷಾ ದೋಷಗಳ ಮಾದರಿಗಳನ್ನು ಪರಿಹಾರ ಶಿಕ್ಷಣದ ಬೋಧನೆಯಲ್ಲಿ (remedial teaching) ಒಂದು ಮುಖ್ಯ ಸಂಪನ್ಮೂಲವಾಗಿ ಬಳಸಿಕೊಳ್ಳಬೇಕೆಂಬ ಸಲಹೆಗಳನ್ನು ಆ ಸಭೆಗಳಲ್ಲಿ ಇಡಲಾಯಿತು. ಜೊತೆಗೆ ಆ ದೋಷಗಳ ಹಿಂದಿನ ಕಾರಣಗಳನ್ನು ವಿವರಿಸುವ ಮೂಲಕ ತರಗತಿಗೆ ಉಪಯುಕ್ತವಾಗುವಂತಹ ವಿಷಯಕ್ಕೆ ಸಂಬಂಧಿಸಿದ ಸಾಮಗ್ರಿಗಳನ್ನು ರೂಪಿಸಲು ಸಾಧ್ಯವಾಯಿತು. ಉದಾಹರಣೆಗೆ ಮಗುವಿನ ಮನೆಭಾಷೆಯಲ್ಲಿ ಉತ್ತಮ ಪುರುಷದ ಕ್ರಿಯಾಪದಕ್ಕೆ ಸಂಬಂಧಿಸಿದಂತೆ ವಿಭಿನ್ನ ಮಾದರಿಗಳಿದ್ದರೆ ಆ ಮಗುವು ಬಾಂಗ್ಲಾದಲ್ಲಿ ಉತ್ತಮ ಪುರುಷ ಸರ್ವನಾಮಗಳನ್ನು ಬಳಸಿಕೊಂಡು ವಾಕ್ಯ ರಚಿಸುವಾಗ ತಪ್ಪುಗಳನ್ನು ಮಾಡುತ್ತದೆ. ಈ ಲೇಖನದಲ್ಲಿ ಹಿಂದೆ ಕುರ್ಮಾಲಿ ಮಕ್ಕಳಿಗೆ ಸಂಬಂಧಿಸಿದಂತೆ ಕೊಟ್ಟ ಉದಾಹರಣೆಯು ಇಲ್ಲಿ ಪ್ರಸ್ತುತವಾಗುತ್ತದೆ. ಅಲ್ಲಿ ಮಗುವು ಉತ್ತಮ ಪುರುಷದ ಕರ್ತೃವಿಗೆ ಸಂಬಂಧಿಸಿದಂತೆ ಪ್ರಥಮ ಪುರುಷದ ಕ್ರಿಯಾಪದ ರೂಪವನ್ನು ಬಳಸುತ್ತದೆ.

ಸ್ಥಳೀಯ ಭಾಷಾ ಜಾಗೃತಿ ತಿರುಗಾಟವು ಶಿಕ್ಷಕರಿಗೆ ಒಂದು ಸರಳ ವಾಸ್ತವಾಂಶವನ್ನು ತಿಳಿಸುವ ಗುರಿ ಹೊಂದಿತ್ತು-ಅದೆಂದರೆ, ಮಕ್ಕಳ

ಭಾಷೆಯನ್ನು ತರಗತಿಕೋಣೆಯಲ್ಲಿ ಬೇರೆ ಬೇರೆ ವಿಧಗಳಲ್ಲಿ ಬಳಸುವುದು ಸಾಧ್ಯವಿದೆ ಎನ್ನುವುದು. ಜೊತೆಗೆ ಶಿಕ್ಷಕರಿಂದ ಸ್ಥಳೀಯ ಭಾಷೆಗಳ ಬಗೆಗೆ ತಿಳಿದುಕೊಳ್ಳುವ ಒಂದು ಅವಕಾಶವನ್ನೂ ಅದು ಕಲ್ಪಿಸುತ್ತದೆ. ಮಕ್ಕಳು ಮಾಡುವ ದೋಷಗಳನ್ನು ಕುರಿತಂತೆ ಈ 'ದೋಷಗಳು' ವಿವಿಧ ಮೂಲಗಳಿಂದ ಆಗಿರುವ ಸಾಧ್ಯತೆ ಇದೆ ಎಂದು, ಮತ್ತು ಅವುಗಳನ್ನು ಕಲಿಕೆಯ ಪ್ರಕ್ರಿಯೆಯಲ್ಲಿ ಇಡುವ ಹೆಜ್ಜೆಗಳು ಎಂಬಂತೆ ನೋಡಬಹುದು ಎಂಬುದನ್ನು ಅವರಿಗೆ ತೋರಿಸಿಕೊಡುವ ಮೂಲಕ ಅವರಿಗೆ ಮಕ್ಕಳ ಭಾಷಾ ದೋಷಗಳ ಮೇಲೆ ಒಂದು ಭಾಷಾವೈಜ್ಞಾನಿಕ ದೃಷ್ಟಿಕೋನವನ್ನು ಒದಗಿಸಲೂ ಅನುವು ಮಾಡಿಕೊಡುತ್ತದೆ. ಅಷ್ಟೇ ಅಲ್ಲ, ನಮ್ಮ ತಿರುಗಾಟದ ಉದ್ದೇಶವು ಶಿಕ್ಷಕರ ಸಲುವಾಗಿ ಒಂದು ಸಾಧನೋಪಾಯವನ್ನು (tool kit) ತಯಾರಿಸುವುದು ಕೂಡಾ ಆಗಿತ್ತು. ಶಿಕ್ಷಕರು ಅದನ್ನು ತಮ್ಮ ತರಗತಿಗಳಲ್ಲಿ ಒಂದು ಸಹಾಯ ಸಾಧನದಂತೆ ಬಳಸಬಹುದು. ಅಲ್ಲದೇ, ಮನೆಯ ಭಾಷೆ ಮತ್ತು ಶಾಲೆಯ ಭಾಷೆಗಳೆರಡನ್ನೂ ಸೇರಿಸಿಕೊಂಡ ಸಂಪನ್ಮೂಲದಿಂದ ವಿವಿಧ ಪ್ರಕಾರದ ಕಲಿಕಾ ಸಾಧನಗಳನ್ನು ತಯಾರಿಸಬಹುದು ಎಂಬ ವಿಚಾರವನ್ನೂ ನಮ್ಮ ತಿರುಗಾಟದ ತಂಡವು ಅವರೊಂದಿಗೆ ಹಂಚಿಕೊಂಡಿತು. ಈ ಸಾಧನಗಳು ದ್ವಿಭಾಷೀಯ ಅಥವಾ ದ್ವಿ-ಉಪಭಾಷೀಯ ಪಠ್ಯಗಳು, ಎರಡು ಅಥವಾ ಅದಕ್ಕಿಂತ ಹೆಚ್ಚಿನ ಭಾಷಿಕ ವಿಧಗಳ ಶಬ್ದಗಳು/ಸಂರಚನೆಗಳನ್ನು ಬಳಸಿ ಮಾಡುವ ಲಿಖಿತ ರೂಪದ ಅಭ್ಯಾಸಕಾರ್ಯಗಳು, ದ್ವಿಭಾಷೀಯ ವರ್ಕ್ ಶೀಟ್ ಗಳು, ಇತ್ಯಾದಿಗಳನ್ನು ಒಳಗೊಂಡಿದ್ದವು.

ಮಕ್ಕಳ ಭಾಷಾ ಬಳಕೆ

ಒಂದೊಮ್ಮೆ ನಾವು ಒಂದೇ ರಾಜ್ಯಕ್ಕೆ ಸೇರಿದ ವಿವಿಧ ಭೌಗೋಳಿಕ ಪ್ರದೇಶಗಳ ಮಕ್ಕಳೊಂದಿಗೆ ಮಾತನಾಡಿದರೆ ನಮಗೆ ಗೊತ್ತಾಗುತ್ತದೆ, ಆ ಮಕ್ಕಳು ಮಾತನಾಡುವಾಗ ಅವರು ಬಳಸುವ ಬಹುವಚನದ ಸೂಚಿಗಳು, ಕಾಲ ಸೂಚಿಗಳು ಮತ್ತು ಕ್ರಿಯಾಪದಗಳು ಒಂದೇ ರೀತಿಯಲ್ಲಿ ಇರದೇ ವಿಭಿನ್ನವಾಗಿರುತ್ತವೆ ಎಂದು. ಪ್ರಾದೇಶಿಕ ಶಿಷ್ಟ ಭಾಷೆಯ

ಕ್ರಿಯಾಪದಗಳು ಸಂಖ್ಯೆ ಅಥವಾ ಲಿಂಗಕ್ಕನುಗುಣವಾಗಿ ಬದಲಾಗದಿರಬಹುದು, ಆದರೆ ಮಗುವು ಏಕ ವಚನ ಮತ್ತು ಬಹುವಚನದ ಕರ್ತೃಗಳಿಗೆ ಸಂಬಂಧಿಸಿದಂತೆ, ಪುರುಷ ಅಥವಾ ಸ್ತ್ರೀಯರಿಗೆ ಸಂಬಂಧಿಸಿದಂತೆ ಭಿನ್ನ ಕ್ರಿಯಾಪದ ರೂಪವನ್ನು ಬಳಸುವ ಸಾಧ್ಯತೆ ಇರುತ್ತದೆ. ಹೆಚ್ಚಿನ ಸಂದರ್ಭಗಳಲ್ಲಿ ಮಕ್ಕಳು ಬಳಸುವ ಸರ್ವನಾಮಗಳು ಪ್ರಾದೇಶಿಕ ಶಿಷ್ಟ ಭಾಷೆಗಳ ಸರ್ವನಾಮಗಳಿಗಿಂತ ಸಂಪೂರ್ಣವಾಗಿ ಭಿನ್ನವಾಗಿರುತ್ತದೆ. ಜೊತೆಗೆ, ಸ್ಥಳೀಯ ಭಾಷೆಯಲ್ಲಿ ಬಳಸುವ ಒಂದು ಸರ್ವನಾಮವು ಪ್ರಾದೇಶಿಕ ಶಿಷ್ಟ ಭಾಷೆಯಲ್ಲಿ ಬೇರೆ ಯಾವುದೋ ಸರ್ವನಾಮವನ್ನು ಸೂಚಿಸಬಹುದು.

ಮಕ್ಕಳು ತಮ್ಮ ನಿತ್ಯದ ಸಂವಹನದಲ್ಲಿ ಪಠ್ಯಪುಸ್ತಕದ ಭಾಷೆಗಿಂತ ಭಿನ್ನವಾಗಿರುವ ಹಲವಾರು ಭಾಷಿಕ ಅಂಶಗಳನ್ನು (ಧ್ವನಿಗಳು, ಶಬ್ದಗಳು, ಪದಗುಚ್ಛಗಳು, ಹೀಗೆ) ಬಳಸುತ್ತಿರುತ್ತಾರೆ ಎಂಬುದು ಅವರು ದಿನನಿತ್ಯ ಬಳಸುವ ಭಾಷೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಗೊತ್ತಾಗುತ್ತದೆ. ಒಂದೊಮ್ಮೆ ಶಿಕ್ಷಕರು ತಮ್ಮ ತರಗತಿಗಳಿಗೆ ನಿಯತವಾಗಿ(regularly) ಟಿಪ್ಪಣಿ ಮಾಡಿಕೊಳ್ಳಲೆಂದು ಕಿರುಪಟ್ಟಿಯೊಂದನ್ನು ಒಯ್ದು, ಅಲ್ಲಿ ಮಕ್ಕಳು ಮನೆಭಾಷೆಯನ್ನು ಮಾತನಾಡುವಾಗ ಬಳಸುವ ಧ್ವನಿಗಳು, ಶಬ್ದಗಳು, ಮತ್ತು ಪದಗುಚ್ಛಗಳಿಗೂ ಪ್ರಾದೇಶಿಕ ಶಿಷ್ಟ ಭಾಷೆಯ ಧ್ವನಿಗಳು, ಶಬ್ದಗಳು, ಮತ್ತು ಪದಗುಚ್ಛಗಳಿಗೂ ಯಾವ ವ್ಯತ್ಯಾಸಗಳಿವೆ ಎಂಬುದನ್ನು ಟಿಪ್ಪಣಿ ಮಾಡಿಕೊಳ್ಳುತ್ತ ಬಂದರೆ ಅದು ಸಂಪನ್ಮೂಲಗಳ ದಾಖಲೀಕರಣಕ್ಕೆ ನಾಂದಿಯಾಗುತ್ತದೆ. ನಂತರ ಅದನ್ನು ಬಳಸಿಕೊಂಡು ತರಗತಿಕೋಣೆಯ ಕಲಿಕಾ ಸಾಧನಗಳನ್ನು ರೂಪಿಸಬಹುದು.

ಇವೆಲ್ಲದರ ಜೊತೆಗೆ ಒಂದು ಮಗುವು ದಿನನಿತ್ಯದ ಬದುಕಿನಲ್ಲಿ ವ್ಯವಹರಿಸುವಾಗ ಆತನ/ಆಕೆಯ ಸಹಜ ಭಾಷಾ ಬಳಕೆಯಲ್ಲಿ ಏನಾದರೂ ವ್ಯತ್ಯಾಸಗಳಿರುತ್ತವೆಯೆ ಎಂಬುದನ್ನೂ ಶಿಕ್ಷಕರು

ಗಮನದಲ್ಲಿಡಬೇಕು. ಅದು ತರಗತಿ ಕೋಣೆಯ ಔಪಚಾರಿಕ ಸನ್ನಿವೇಶದಲ್ಲಿಯೇ ಇರಬಹುದು ಅಥವಾ ಆಟದ ಸಮಯದ ಅನೌಪಚಾರಿಕ ಮಾತುಗಳೇ ಇರಬಹುದು. ನಾವು ನಮ್ಮ ಸುತ್ತಲಿನ ಮಕ್ಕಳ ಮಾತುಗಳನ್ನೇ ಗಮನವಿಟ್ಟು ಆಲಿಸಿದರೆ ಸ್ಥಳೀಯ ಭಾಷೆಯನ್ನು ಅಥವಾ ಭಾಷೆಗಳನ್ನು ಮಗುವು ಬೇರೆ ಬೇರೆ ಸನ್ನಿವೇಶಗಳಲ್ಲಿ ಹೇಗೆ ಬಳಸುತ್ತದೆ ಎನ್ನುವುದು ಗೊತ್ತಾಗುತ್ತದೆ. ಉದಾಹರಣೆಗೆ ಮಗುವು ಇತರ ಮಕ್ಕಳೊಡನೆ ಆಡುವಾಗ ಒಂದು ಸ್ಥಳೀಯ ರೂಪವನ್ನು ಬಳಸುತ್ತದೆ, ಆದರೆ ನಗರದ ಪುಸ್ತಕದಂಗಡಿಯಲ್ಲಿ ಆ ಭಾಷೆಯ ಶಿಷ್ಟ ರೂಪವನ್ನು ಬಳಸಲು ಯತ್ನಿಸುತ್ತದೆ. ಅವಶ್ಯವಿದ್ದಾಗ ಮಗುವು ಶಿಷ್ಟ ಸಂಪರ್ಕ ಭಾಷೆಯನ್ನು ಮಾತನಾಡುತ್ತದೆ ಮತ್ತು ಕೆಲವೊಮ್ಮೆ ನುಡಿಗಳ ಹೊಸ ರೂಪಗಳನ್ನೂ ಸೃಷ್ಟಿಸುತ್ತದೆ. ಹೀಗೆ ಹೊಸ ಶಬ್ದಗಳನ್ನು ಸೃಷ್ಟಿಸುವುದು ಕೆಲವೊಮ್ಮೆ ಪ್ರಾದೇಶಿಕ ಶಿಷ್ಟ ಭಾಷೆಯ ಮಟ್ಟವನ್ನು ಸಾಧಿಸಲಾಗದೇ ವಿಫಲವಾಗುವುದರ ಫಲವಾಗಿ ಆಗಿರುತ್ತದೆ. ಇನ್ನೂ ಕೆಲವೊಮ್ಮೆ, ನಗರವಾಸಿಗಳ ಎದುರು 'ನಾನು ಉಪಭಾಷೆಗಳನ್ನು ಆಡುವ ಗುಂಪಿಗೆ ಸೇರಿದವನಲ್ಲ' ಎಂಬುದನ್ನು ಪ್ರದರ್ಶಿಸುವ ಒಂದು ಯತ್ನವೂ ಆಗಿರುತ್ತದೆ. ಬಹಳ ಸಲ, ಶಿಕ್ಷಕರು ಗಮನಿಸುವಂತೆ, ಮಕ್ಕಳು ಹೊಸ ರೂಪಗಳನ್ನು ಬಳಸುತ್ತಿರುವುದಿಲ್ಲ, ನುಡಿಗಳ ಭಿನ್ನ ರೂಪಗಳನ್ನು ಬೆರಕೆ ಮಾಡುವುದಿಲ್ಲ, ಅಥವಾ ಪದೇ ಪದೇ ರೂಪಗಳ ಒಂದು ಕಂತೆ ಅಥವಾ ಮಾಲೆ(set)ಯಿಂದ ಮತ್ತೊಂದಕ್ಕೆ ಬದಲಾಯಿಸುವುದಿಲ್ಲ. ಅಲ್ಲದೆ ಹೀಗೂ ಇದೆ: ಒಂದು ವೇಳೆ ಮಗುವು ನೆರೆ ರಾಜ್ಯದ ಗಡಿಯಲ್ಲಿರುವ ಹಳ್ಳಿಯೊಂದರಲ್ಲಿ ವಾಸಿಸುತ್ತಿದ್ದರೆ ಗಡಿಯ ಆ ಬದಿಯ ಮಕ್ಕಳನ್ನು ಒಳಗೊಂಡ ಆಟದ ಗುಂಪೊಂದನ್ನು ಆ ಮಗುವು ಹೊಂದಿರುವ ಸಾಧ್ಯತೆ ಇರುವುದರಿಂದ ಆ ಮಗುವು ಆ ಮತ್ತೊಂದು ರಾಜ್ಯದ ಪ್ರಾದೇಶಿಕ ಶಿಷ್ಟ ಭಾಷೆಯನ್ನು ಬಳಸುತ್ತಿರುತ್ತದೆ, ಆದ್ದರಿಂದ ಮಗುವು ವಿಭಿನ್ನ ಪ್ರದೇಶಗಳು ಮತ್ತು ವಿಭಿನ್ನ ಸನ್ನಿವೇಶಗಳಿಗೆ ತಕ್ಕಂತೆ ತನ್ನ ದಿನನಿತ್ಯದ ಮಾತುಗಳಲ್ಲಿ ವ್ಯತ್ಯಾಸದ ಭಿನ್ನ ಮಾದರಿಗಳನ್ನು ಪ್ರದರ್ಶಿಸುತ್ತದೆ ಮತ್ತು ಮಾತಿನ ಮಾದರಿಗಳನ್ನು ಕೌಶಲಪೂರ್ವಕವಾಗಿ ಬದಲಾಯಿಸುತ್ತದೆ.

ಒಂದೆಡೆ, ವಿಭಿನ್ನ ಕಾಲಗಳು ಮತ್ತು ಸ್ಥಳಗಳಲ್ಲಿ ಬಳಸುವ ವಿಭಿನ್ನ ಭಾಷಿಕ ವೈವಿಧ್ಯಗಳು ವಿಭಿನ್ನ ಭಾಷಾ ರೂಪಗಳನ್ನು ಕುರಿತ ಮಗುವಿನ ಧೋರಣೆಯನ್ನು ಬಿಂಬಿಸುತ್ತವೆ. ಇನ್ನೊಂದೆಡೆ, ಶಾಲೆಯಲ್ಲಿ ಸ್ಥಳೀಯ ಭಾಷೆಯ ಬಳಕೆಯನ್ನು ಶಿಕ್ಷಕರು ನಿಷೇಧಿಸಿದರೆ ಅದು ಮಗುವಿನ ಅನನ್ಯತೆಯ ಮೇಲೆ, ಅಸ್ಮಿತೆಯ ಮೇಲೆ, ಪರಿಣಾಮವನ್ನು ಬೀರುತ್ತದೆ.

ತರಗತಿಕೋಣೆಯಲ್ಲಿನ ವ್ಯತ್ಯಸನೀಯತೆಯನ್ನು (variability) ನಿರ್ವಹಿಸುವುದು

ಭಾಷಾ ವ್ಯತ್ಯಾಸಗಳು ಮತ್ತು ಬಹುರೂಪಗಳನ್ನು ಕುರಿತ ಶಿಕ್ಷಕರ ಗ್ರಹಿಕೆಯು ತರಗತಿಕೋಣೆಯಲ್ಲಿನ ಕಾರ್ಯರೀತಿಗಳಿಗೆ ಒಂದು ನೆಲೆಯಾಗಿ ಪರಿಣಮಿಸಬೇಕು. ಗರಿಷ್ಠ ಪ್ರಮಾಣದ ಭಾಷಾ ವ್ಯತ್ಯಾಸಗಳನ್ನು ತೋರಿಸಲು ಮಗುವಿಗೆ ತಕ್ಕ ಸಾಮರ್ಥ್ಯವಿದೆ ಎಂಬ ಸಂಗತಿಯ ಮೇಲೆ ಶಿಕ್ಷಕರಿಗೆ ಗಮನವಿರುತ್ತದೆಯೆ? ಹೆಚ್ಚಿನ ಸಂದರ್ಭಗಳಲ್ಲಿ ಇದಕ್ಕೆ ಉತ್ತರವು 'ಹೌದು' ಎಂದಾಗಿರುತ್ತದೆ. ಕೆಲವು ಸಂದರ್ಭಗಳಲ್ಲಿ ಶಿಕ್ಷಕರು ಮಗುವಿನ ಮನೆ ಭಾಷೆ ಮತ್ತು ಔಪಚಾರಿಕ ಶಿಕ್ಷಣದ ಭಾಷೆ ಎರಡನ್ನೂ ಬಳಸಿ ಮಗುವಿನೊಂದಿಗೆ ಸಂವಹನ ನಡೆಸಲು ಯತ್ನಿಸುತ್ತಾರೆ. ಕೆಲವು ಸಂಪನ್ಮೂಲಗಳನ್ನು ಎರಡು ಅಥವಾ ಹೆಚ್ಚಿನ ಭಾಷಿಕ ವೈವಿಧ್ಯಗಳನ್ನು ಬಳಸಿಕೊಂಡು ಈ ಕೆಳಗಿನಂತೆ ತಯಾರಿಸಬಹುದು. ಜಲ್ದಾ ಪ್ರಾಂತ್ಯದ ಪುರುಲಿಯಾ ಜಿಲ್ಲೆಯಲ್ಲಿ ಕುರ್ಮಾಲಿ ಮಾತನಾಡುವ ಮಕ್ಕಳಿಗೆ ಬೋಧಿಸುವ ಶಿಕ್ಷಕರು ಕೋಷ್ಟಕದಲ್ಲಿ ಕೊಟ್ಟ ಸರ್ವನಾಮಗಳ ಪಟ್ಟಿಯನ್ನು ಒಂದು ಸಂಪನ್ಮೂಲವಾಗಿ ಪರಿಗಣಿಸಬಹುದು.

ಕೋಷ್ಟಕ 1

ಜಲ್ದಾ ಪ್ರಾಂತ್ಯದಲ್ಲಿ ಮಾತನಾಡುವ ಬಾಂಗ್ಲಾ ಭಾಷೆಯ ಎರಡು ಭಾಷಿಕ ವೈವಿಧ್ಯಗಳನ್ನು ಸೇರಿಸಿ ತಯಾರಿಸಿದ ಸಂಪನ್ಮೂಲ

	ಬಾಂಗ್ಲಾ		ಕುರ್ಮಾಲಿ	
ಸರ್ವನಾಮಗಳು	**ಏಕವಚನ**	**ಬಹುವಚನ**	**ಏಕವಚನ**	**ಬಹುವಚನ**
ಉ. ಪುರುಷ	ಅಮಿ	ಅಮ್ರಾ	ಮೋಯಿ	ಹಮ್ರಾ
ಮ.ಪುರುಷ	ತುಯಿ/ತುಮಿ/ಅಪ್ನಿ	ತೋರಾ/ತೊಮ್ರಾ/ಅಪ್ನಾರಾ	ತ್ಯೋಯಿ	ತೋರಾ
ಪ್ರ.ಪುರುಷ	ಸೆ	ಓರಾ	ಒನೋಯಿ	ಓರಾ

ಕೋಷ್ಟಕ 1 ರ ಸಹಾಯದಿಂದ ಶಿಕ್ಷಕರು ಕಪ್ಪುಹಲಗೆಯ ಮೇಲೆ ಕೋಷ್ಟಕವೊಂದನ್ನು ರಚಿಸಿ ಮಗುವಿನ ಶಬ್ದಭಂಡಾರದಲ್ಲಿರುವ ಎಲ್ಲಾ ಉತ್ತಮ ಪುರುಷ ಸರ್ವನಾಮದ ಸಾಧ್ಯತೆಗಳನ್ನು ಬರೆಯಬಹುದು. ಅಲ್ಲೇ ಮತ್ತೊಂದು ಕೋಷ್ಟಕವನ್ನು ರಚಿಸಿ ಉತ್ತಮ ಪುರುಷ ಸರ್ವನಾಮಕ್ಕೆ ಹೊಂದಿಕೊಳ್ಳುವ ಎಲ್ಲಾ ಕ್ರಿಯಾಪದ ರೂಪಗಳನ್ನು ಬರೆಯಬಹುದು. ನಂತರ ಆ ಎರಡೂ ಕೋಷ್ಟಕಗಳಲ್ಲಿ ಕೊಟ್ಟ ಶಬ್ದಗಳನ್ನು ಬಳಸಿಕೊಂಡು ವಾಕ್ಯಗಳನ್ನು ರಚಿಸುವಂತೆ ಶಿಕ್ಷಕರು ವಿದ್ಯಾರ್ಥಿಗಳಿಗೆ ಹೇಳಬಹುದು. ಆಗ ಬಹುಶಃ ವಿದ್ಯಾರ್ಥಿಗಳು ಕೋಷ್ಟಕದಲ್ಲಿನ ವಿವಿಧ ಚೌಕಗಳನ್ನು (ಬಾಂಗ್ಲಾ, ಕುರ್ಮಾಲಿ, ಕೆಲವೊಮ್ಮೆ ಹಿಂದಿಯೂ ಕಾಣಿಸಿಕೊಳ್ಳಬಹುದು) ಒಂದಕ್ಕೊಂದು ಸೇರಿಸಿ, ಹೊಂದಿಸಿ ವಾಕ್ಯಗಳನ್ನು ರಚಿಸಬಹುದು. ಹೀಗೆ ಮಾಡುವುದರಿಂದ ವಿದ್ಯಾರ್ಥಿಗಳಿಗೆ ತಮಗೆ ಲಭ್ಯವಿರುವ ಪರ್ಯಾಯ ರೂಪಗಳಿಂದ ವಿವಿಧ ಸಂರಚನೆಗಳನ್ನು ಅನ್ವೇಷಿಸುವ ಸ್ವಾತಂತ್ರ್ಯ ಸಿಕ್ಕಂತಾಗುತ್ತದೆ.

ಹಾಗೆಯೇ ಸ್ಥಳೀಯ ಭಾಷೆ ಮತ್ತು ಪ್ರಾದೇಶಿಕ ಶಿಷ್ಟ ಭಾಷೆಗಳಿಂದ ಕಲೆ ಹಾಕಿದ ಸಂಗ್ರಹವನ್ನು ಉಪಯೋಗಿಸಿ ಅದೇ ರೀತಿಯ ಸಾಮಗ್ರಿಗಳನ್ನು ರೂಪಿಸಿಕೊಂಡು ತರಗತಿಕೋಣೆಯ ಒಂದು ಪ್ರಧಾನ

ಸಂಪನ್ಮೂಲವನ್ನಾಗಿ ಬಳಸಿಕೊಳ್ಳಬಹುದು. ಭಾಷಾ ಸಂರಚನೆ ಮತ್ತು ಮಕ್ಕಳ ಭಾಷೆಯ ಒಳಗಿನ ವ್ಯತ್ಯಾಸಗಳ ಬಗೆಗಿನ ಒಂದು ಸರಳ ಗ್ರಹಿಕೆಯಿಂದ ಕಲಿಕಾ ಸಾಮಗ್ರಿಗಳನ್ನು ರೂಪಿಸಿ ಬೆಳೆಸಬಹುದು. ಬಳಸಲು ಸುಲಭವಾದ ಕಲಿಕಾ ಸಾಮಗ್ರಿಗಳನ್ನ ಶಿಕ್ಷಕರು ಸ್ವತಃ ತಯಾರಿಸಬಹುದು, ಅವು ದ್ವಿಭಾಷೀಯವೂ ಆಗಿರಬಹುದು ಅಥವಾ ದ್ವಿ-ಉಪಭಾಷೀಯವಾಗಿರಬಹುದು. ಮಕ್ಕಳೊಂದಿಗೆ ಸುಮ್ಮನೆ ಕತೆಗಳನ್ನು ಸೃಜಿಸುವ ಅವಧಿಗಳನ್ನು ಕೂಡಾ ಹಮ್ಮಿಕೊಳ್ಳಬಹುದು, ಅಲ್ಲಿ ದ್ವಿಭಾಷೀಯ ಕತೆಗಳನ್ನು ಹಂಚಿಕೊಳ್ಳಬಹುದು ಮತ್ತು ಅವುಗಳನ್ನು ಬರೆದಿಟ್ಟು ಭವಿಷ್ಯದಲ್ಲಿ ಯಾರಿಗಾದರೂ ಉಪಯೋಗಿಸಲು ಬರುವಂತೆ ಕಾಪಿಡಬಹುದು. ಸ್ಥಳೀಯ ಭಾಷೆಯಲ್ಲಿ ಒಂದು ಶಾಲಾ ಪಠ್ಯದ ನಿರೂಪಣೆಯನ್ನು ಮಾಡಿಸಿ ಅದನ್ನು ಸಹಾ ಬರೆದಿಟ್ಟು ಅಥವಾ ಧ್ವನಿಮುದ್ರಣದಲ್ಲಿ ಕಾಪಿಡಬಹುದು. ಪ್ರಾದೇಶಿಕ ಮತ್ತು ಶಿಷ್ಟ ಉಪಭಾಷೆಗಳೆರಡನ್ನೂ ಬಳಸಿ ಪದಬಂಧದಂತಹ ಆಟಗಳನ್ನು ತಯಾರಿಸಬಹುದು. ಇವೆಲ್ಲಾ ದ್ವಿಭಾಷೀಯ ಪಠ್ಯಗಳನ್ನು ಮುಂದಿನ ದಿನಗಳಲ್ಲಿ ಒಂದು ಸಂಪನ್ಮೂಲದಂತೆ ಉಪಯೋಗಿಸಬಹುದು.

ತರಗತಿಕೋಣೆಯಲ್ಲಿ ದ್ವಿಭಾಷಾ ಬಳಕೆಯ ಬಗೆಗಿನ ಅರಿವನ್ನು ಉತ್ತೇಜಿಸುವುದು

ತರಗತಿಕೋಣೆಯಲ್ಲಿ ಸ್ಥಳೀಯ ಭಾಷಾ ಬಳಕೆಯನ್ನು ಪ್ರೋತ್ಸಾಹಿಸುವ ನಡೆಯು ಮಕ್ಕಳಿಗೆ ಲಾಭದಾಯಕವಾಗುವ ಅಗಾಧ ಸಾಧ್ಯತೆಗಳನ್ನು ಹೊಂದಿದೆ. ಒಂದು ವೇಳೆ ನಿಯತ ಕ್ರಮದಲ್ಲಿ ದ್ವಿಭಾಷಿಕ ಪಠ್ಯಗಳು ಮತ್ತು ದ್ವಿಭಾಷಿಕ ಕಾರ್ಯಚಟುವಟಿಕೆಗಳ ಮೂಲಕ ಸ್ಥಳೀಯ ಭಾಷೆಯನ್ನು ಉತ್ತೇಜಿಸಿದರೆ ಮಕ್ಕಳು ಸ್ಥಳೀಯ ಭಾಷಾ ಬಳಕೆಗೆ ಸಂಬಂಧಿಸಿದಂತೆ ನಿಷೇಧಗಳನ್ನು, ನಿಷೇಧಾತ್ಮಕ ಮಾರ್ಗಸೂಚಿಗಳನ್ನು ಎದುರಿಸುವುದು ಕಡಿಮೆಯಾಗುತ್ತ ಹೋಗುತ್ತದೆ. ಆ ಮೂಲಕ ಅವರು 'ಶಕ್ತಿಶಾಲಿ' ಭಾಷೆಯೊಂದರ ಮೇಲಿನ ಭಯವನ್ನು ಕೂಡಾ

ನಿವಾರಿಸಿಕೊಳ್ಳಬಹುದು. ಶಾಲೆಯಲ್ಲಿ 'ಕೆಟ್ಟ' ಭಾಷೆ ಎಂದು ಶಿಕ್ಷಕರು ಕರೆಯುವ ಭಾಷೆಯಲ್ಲಿ ಮಾತನಾಡಿದ್ದಕ್ಕಾಗಿ ಸಿಗುವ ಶಿಕ್ಷೆಗಳು ನಿಲ್ಲಬಹುದು. ಆದ್ದರಿಂದ, ತರಗತಿಯಲ್ಲಿ ಮಕ್ಕಳು ತಮ್ಮ 'ಸ್ವಂತ'ದ ಭಾಷೆಯನ್ನು ಬಳಸಲು ಪ್ರೋತ್ಸಾಹ ನೀಡುವುದು ದೊಡ್ಡ ಬದಲಾವಣೆಯನ್ನು ಉಂಟುಮಾಡಬಲ್ಲದು.

ನಾವು ಪ್ರತಿನಿತ್ಯ ಬಳಸುವ ಭಾಷೆಯು ನಮ್ಮ ಸಮಾಜದಲ್ಲಿ ಅಂತಸ್ಥವಾಗಿರುವ ಸಾಮಾಜಿಕ ವಾಸ್ತವಗಳು ಮತ್ತು ಅಸಮಾನತೆಗಳನ್ನು ಬಿಂಬಿಸುತ್ತದೆ. ನಿಜವಾಗಿ ನೋಡಿದರೆ, ಮಕ್ಕಳು ತಮ್ಮ ಮನೆ ಭಾಷೆಯನ್ನು, ಅದಕ್ಕೆ ಅಂಟಿಸಿರುವ ಕಳಂಕದಿಂದಾಗಿ, ಸಾಮಾಜಿಕ ರಂಗದಲ್ಲಿ ಬಳಸುವುದಿಲ್ಲ. ತಮ್ಮ ಸ್ಥಳೀಯ ಭಾಷಾ ವೈವಿಧ್ಯಕ್ಕೆ ಶಿಕ್ಷಕರು ನಕಾರಾತ್ಮಕ ಧೋರಣೆಯನ್ನು ತೋರಿದರೂ ಸಹಾ ಮಕ್ಕಳು ತೊಂದರೆ ಅನುಭವಿಸುತ್ತಾರೆ. ಈಗೀಗ ಭಾಷಾ ಬಳಕೆಯ ಸ್ವರೂಪವನ್ನು ಮಾರ್ಪಾಡು ಮಾಡುವ ಉದ್ದೇಶವನ್ನಿಟ್ಟುಕೊಂಡು ತರಗತಿಕೋಣೆಯಲ್ಲಿ ಹೊಸ ಹೊಸ ಕಾರ್ಯರೀತಿಗಳನ್ನು ಅಳವಡಿಸಿಕೊಳ್ಳಲಾಗುತ್ತಿದೆ. ದ್ವಿಭಾಷಿಕ ಅಥವಾ ದ್ವಿ-ಉಪಭಾಷಿಕ ಬೋಧನೆಯನ್ನು ನಿಯತಕ್ರಮದಲ್ಲಿ ಮಾಡುವ ಮೂಲಕ ತರಗತಿಕೋಣೆಯಲ್ಲಿ ನಡೆಯುವ ಭಾಷಾ ತಾರತಮ್ಯವನ್ನು ತಡೆಗಟ್ಟಬಹುದು. ತರಗತಿಕೋಣೆಯಲ್ಲಿ ಸಂವಹನದ ಮಾದರಿಗಳನ್ನು ಕೂಡಾ ಮಾರ್ಪಾಡು ಮಾಡುವ ಮೂಲಕ ಮತ್ತು ವಿಭಿನ್ನ ಭಾಷಿಕ ರೂಪಗಳನ್ನು ಉತ್ತೇಜಿಸುವ ಮೂಲಕ ದ್ವಿ-ಉಪಭಾಷಿಕ ಸಂಪನ್ಮೂಲಗಳ ಬಗೆಗೆ ಶಿಕ್ಷಕರಲ್ಲಿ ಅರಿವನ್ನು ಮೂಡಿಸಬಹುದು.

ದ್ರಿಪ್ತಾ ಪಿಪಲಾಯಿಯವರು ದಿಲ್ಲಿ ವಿಶ್ವವಿದ್ಯಾಲಯದ ಸೆಂಟರ್ ಫಾರ್ ಅಡ್ವಾನ್ಸಡ್ ಸ್ಟಡೀಸ್ ಇನ್ ಲಿಂಗ್ವಿಸ್ಟಿಕ್ಸ್ ನಲ್ಲಿ ಪಿಎಚ್ ಡಿ ಪದವಿಯನ್ನು ಪಡೆದಿದ್ದಾರೆ. ಈಗ ಅವರು ಬೆಂಗಳೂರಿನ ವಿಪ್ರೊ ಅಪ್ಲೈಯಿಂಗ್ ಥಾಟ್ಸ್ ಇನ್ ಸ್ಕೂಲ್ಸ್ ಯೋಜನೆಯಲ್ಲಿ ಸಂಶೋಧಕರಾಗಿದ್ದಾರೆ. ಅವರ ಸಂಶೋಧನಾ ಆಸಕ್ತಿಗಳೆಂದರೆ ಭಾಷಾ ಸಂಘರ್ಷಗಳು ಮತ್ತು ವಾಕ್ಯರಚನೆಯಲ್ಲಿನ ವ್ಯತ್ಯಾಸಗಳು, ದ್ವಿಭಾಷಿಕ ಮತ್ತು ದ್ವಿ-ಉಪಭಾಷಿಕ ಪಠ್ಯಕ್ರಮವನ್ನು ರೂಪಿಸುವುದು, ಹಾಗೂ ಮಕ್ಕಳ ಭಾಷಾ ಹಕ್ಕುಗಳು.

ಅವರು ದಿಲ್ಲಿ ಮತ್ತು ಕಲ್ಕತ್ತಾ ವಿಶ್ವವಿದ್ಯಾಲಯಗಳಲ್ಲಿ ಭಾಷಾವಿಜ್ಞಾನದ ಬೋಧಕಿಯಾಗಿಯೂ ಕೆಲಸ ಮಾಡಿದ್ದಾರೆ. driptap@gmail.com

ಪರಾಮರ್ಶನ ಗ್ರಂಥಗಳು:

Anderson, B. (1983). Imagined communities:Reflections on the origin and spread of nationalism. London: Verso.

ಚಿಂತನಾತ್ಮಕ ಪ್ರಶ್ನೆಗಳು:

1. ಈ ಲೇಖನದಲ್ಲಿ ಕೊಟ್ಟ ಕೋಷ್ಟಕವನ್ನು ಅನುಸರಿಸಿ ನೀವೂ ನಿಮ್ಮ ತರಗತಿಗಳಲ್ಲಿನ ಮಕ್ಕಳ ಭಾಷಾ ವ್ಯತ್ಯಾಸಗಳನ್ನು ಗುರುತಿಸಿ, ಕಲಿಕಾ ಸಂಪನ್ಮೂಲಗಳನ್ನು ರೂಪಿಸಿ.
2. ಮನೆ ಭಾಷೆಯಲ್ಲಿ ಮಾತನಾಡುವುದು ಅಪಮಾನಕರ ಎಂಬ ಕಾರಣಕ್ಕೆ ಮಕ್ಕಳು ಸಾಮಾಜಿಕ ರಂಗದಲ್ಲಿ ತಮ್ಮ ಮನೆ ಭಾಷೆಯಲ್ಲಿ ಮಾತನಾಡುವುದಿಲ್ಲ ಎಂದು ಲೇಖಕರು ಹೇಳುತ್ತಾರೆ. ಇದು ಎಷ್ಟರಮಟ್ಟಿಗೆ ಸರಿ ಎಂದು ನಿಮಗನಿಸುತ್ತದೆ?

ಅನುವಾದಕರು: ಪ್ರಜ್ಞಾ ಎಲ್.ಎಸ್. **ಪರಿಶೀಲನೆ**: ಗಣೇಶ್ ಎಚ್

ಮೂಲ: *Language and Language Teaching* Volume 4 Number 2 Issue 8 July 2015